ಇಷ್ಟು ಮಾತ್ರವಲ್ಲದೆ ಈ ಪ್ರೌಢಶಾಲೆಗೆ ಸ್ವಂತವಾದ ಒಂದು ಕೊಠಡಿ ಕೂಡ ಇರುವುದಿಲ್ಲ. ಅಲ್ಲಿಯ ಹಿರಿಯ ಪ್ರಾಥಮಿಕ ಶಾಲೆಯ ಒಂದು ಕೊಠಡಿಯಲ್ಲಿ ಪಾಠ ಪ್ರವಚನ ನಡೆಯುತ್ತಿರುವುದೆಂ ತುಂಬಾ ಶೋಚನೀಯಂ ಸಂಗತಿ. ಆದುದರಿಂದ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ವಿದ್ಯಾ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಉಪಾಧ್ಯಾಯರ ಕೊರತೆ ಇದೆ ಎಂಬುದು ಎಲ್ಲರಿಗೂ ಗೊತ್ತು. ಅವರನ್ನು ರಿಕ್ರೂಟ್ ಮಾಡಲು ವ್ಯವಸ್ಥೆ ಮಾಡಿದ್ದೇವೆ. ಶಾಲೆಗೆ ಕಟ್ಟಡ ಇಲ್ಲ ವೆಂದಿದ್ದಾರೆ. ಅದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

(xviii) ಕುಣಿಗಲ್ ತಾಲ್ಲೂಕಿನ ಕಿತ್ತಮಂಗಲ, ಯಡವಣಿ, ಮತ್ತು ದೊಡ್ಡ ಮಧುರೆ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲದಿರುವುದು,

ಶ್ರೀ ಡಿ. ನಾಗರಾಜಯ್ಯ (ಹುಲಿಯೂರುದುರ್ಗ).—ಅಧ್ಯಕ್ಷರೇ, ಕುಣಿಗಲ್ ತಾಲ್ಲೂಕಿನ ೧) ಕಿತ್ತಲಮಂಗಲ ೨) ಯಡವಣಿ ೩) ದೊಡ್ಡ ಮಧುರೆ ಆಸ್ಪತ್ರೆಗಳಲ್ಲಿ ಸುಮಾರು ೪ ವರ್ಷಗಳಿಂದ ವೈದ್ಯರಿಲ್ಲದೆ ಇರುವ ತೊಂದರೆಯಂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇಲ್ಲಿಯ ಗ್ರಾಮಸ್ಥರಿಗೆ ಆಸ್ಪತ್ರೆಯಿದ್ದರೂ ಇಲ್ಲದಂತಾಗಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರಿಸಲಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಸಚಿವರು).— ಮಾನ್ಯ ಸದಸ್ಯರು ಹೇಳಿರುವುದು ನಿಜ. ನಾನು ಡಾಕ್ಟರ್‌ಗಳನ್ನು ತೈನಾತಿ ಆಧಾರದ ಮೇಲೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

xix) ಜಿಗಣಿ ಗ್ರಾಮದ ಸ.ನಂ. ೧೨೨ ಮತ್ತು ೧೨೩ರ ನಿವೇಶನಗಳನ್ನು ಕೈಗಾರಿಕಾ ಅಭಿವೃದ್ಧಿ ಎಸ್ಟೇಟಾಗಿ ಪರಿವರ್ತಿಸಿರುವುದು

ಶ್ರೀ ಎಂ. ಪಿ. ಕೇಶವಮೂರ್ತಿ (ಆನೇಕಲ್).— ಮಾನ್ಯ ಅಧ್ಯಕ್ಷರೇ ೧೯೭೫—೭೬ನೇ ಸಾಲಿನಲ್ಲಿ ನಿವೇಶನರಹಿತರಿಗೆ ಜಿಗಣಿ ಗ್ರಾಮದ ಸ.ನಂ. ೧೨೨ ಮತ್ತು ೧೨೩ ನಿವೇಶನಗಳನ್ನು ಹಂಚಿ ಪಕ್ಕಾ ಪತ್ರಗಳನ್ನು ಕೊಟ್ಟಿದ್ದು ಮೇರೆಗೆ ಮನೆಗಳನ್ನು ಫಲಾನುಭವಿಗಳು ಕಟ್ಟಿ ವಾಸ ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಮೇಲಿನ ಜಾಗವನ್ನು ಕೈಗಾರಿಕಾ ಅಭಿವೃದ್ಧಿ ಎಸ್ಟೇಟ್‌ಗೆ ವಾಸವಾಗಿರುವಾಗಲೇ ಕೊಡುವುದಾಗಿ ತೀರ್ಮಾನಿಸಿ ಕೆಲವು ಮನೆಗಳನ್ನು ನೆಲಸಮ ಮಾಡಿ ಉಚ್ಚ ನ್ಯಾಯಾಲಯವು ಸ್ಟೇ ಮಾಡಿರುವುದನ್ನು ಕಡೆಗಣಿಸಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ ಈ ಸ್ಥಳದಲ್ಲೇ ಫಲಾನುಭವಿಗಳನ್ನು ಇರಗೊಳಿಸಬೇಕಾಗಿಯೂ ತಪ್ಪಿದಲ್ಲಿ ಅವರಿಗೆ ಕೂಡಲೇ ಸದರಿ ಸೈಟುಗಳನ್ನು ಕೊಡಿಸ ಬೇಕಾಗಿ ಅಲ್ಲಿಯವರೆಗೆ ಅವರನ್ನು ಸ್ಥಳಾಂತರ ಮಾಡಿಸಬಾರದೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ.

xx) ಹೋಡೆ—ಕೋಡಿ ಬೆಂಗ್ರೆ ರಸ್ತೆಯು ಡಾಂಬರ್ ಕೆಲಸ ಕಳಪೆಯಾಗಿರುವುದು

ಶ್ರೀ ಬಸವರಾಜ್.—ಅಧ್ಯಕ್ಷರೇ,ನನ್ನ ಮತದಾರ ಕ್ಷೇತ್ರದಲ್ಲಿ ಹೋಡೆ—ಕೋಡಿ ಬೆಂಗ್ರೆ ರಸ್ತೆಯು ಫಿಶರೀಸ್ ರಸ್ತೆಯಾಗಿರುತ್ತದೆ. ರಸ್ತೆಯು ಪ್ರಾರಂಭದ ೨.೫ ಕಿಲೋಮೀಟರ್‌ವರೆಗಿನ ರಸ್ತೆಗೆ ೩ ತಿಂಗಳ ಹಿಂದೆ ಡಾಮರು ಹಾಕಲಾಗಿದೆ. ಆದರೆ ಈ ಕೆಲಸವು ಕಳಪೆಯಾಗಿದ್ದು ಆ ಪರಿಸರದ ಗ್ರಾಮಸ್ಥರು ಮನವಿಯನ್ನು ಮೀನುಗಾರಿಕಾ ನಿರ್ದೇಶಕರಿಗೆ ಸಲ್ಲಿಸಿರುತ್ತಾರೆ. ಆದುದರಿಂದ ಸರಕಾರ ಆ ಕಂಠಿತು ಸೂಕ್ಷ್ಮ ತನಿಖೆ ನಡೆಸಬೇಕೆಂದೂ ಅಲ್ಲದೆ ರಸ್ತೆಯಲ್ಲಿ ಬಾಕಿ ಉಳಿದಿರುವ ೧ ಕಿ.ಮೀ, ರಸ್ತೆಗೆ ಡಾಮರನ್ನು ಹಾಕಿಸ ಬೇಕು, ಇದರಿಂದ ಮಲ್ಪೆಯಿಂದ ಕೋಡಿ ಬೆಂಗ್ರೆವರೆಗಿನ ೧೦ ಕಿ ಮೀ. ಉದ್ದದ ರಸ್ತೆಯು ಸಂಪೂರ್ಣ ಡಾಮರು ಆಗುತ್ತದೆ. ಹಾಗಾಗಿ ಆ ರಸ್ತೆಯಲ್ಲಿ ನನ್ನ ಭಾಗದಲ್ಲಿ ಉಳಿದಿರುವ ೧ ಕಿ.ಮೀ. ರಸ್ತೆಗೆ ಕೂಡಲೇ ಡಾಂಬರು ಹಾಕಿಸಿ ಕೊಡಬೇಕಾಗಿ ಸರಕಾರವನ್ನು ತಪ್ಪು ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ ಇದು ಬಹಳ ಮುಖ್ಯವಾದ ಲಿಂಕ್ ಆಗಿರುವುದು. ಇದನ್ನು ಮರಾಪಂತ್ ಇಲಾಖೆಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.